## ದಿನಾಂಕ: 18.05.2021ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್‌ಗೆ ಸಂಬಂಧಿಸಿದಂತೆ ಜೂಮ್ ಸಭೆಯಲ್ಲಿನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಹಾಜರಿದ್ದ ಸಮಿತಿ ಸದಸ್ಯರು:-**

1) ಶ್ರೀ ಮಹದೇವ್.ಹೆಚ್.ಎಸ್- ವಾರ್ಡ್ ಸಮಿತಿಅಧ್ಯಕ್ಷರು ಹಾಗೂ ಕಾರ್ಯಪಾಲಕಅಭಿಯಂತರರು(ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ಬೊಮ್ಮನಹಳ್ಳಿ ವಲಯ
2) ಶ್ರೀ ಜಗದೀಶ್‌ಸಿಂಗ್ ಬಾಡ್-ನಾರಾಯಣನಗರ 3ನೇ ಬ್ಲಾಕ್RWA
3) ಶ್ರೀ ಎನ್.ಆರ್.ಸೋಮಶೇಖರ್-ನಾರಾಯಣನಗರ 3ನೇ ಬ್ಲಾಕ್RWA
4) ಶ್ರೀ ಎನ್.ವೆಂಕಟೇಶ್-ಮುನಿರೆಡ್ಡಿ ಬಡಾವಣೆRWA
5) ಶ್ರೀ. ರಾಜೇಶ್-ಸಿಂಗಾಪುರ್ ಗಾರ್ಡನ್ ಬಡಾವಣೆRWA
6) ಶ್ರೀಮತಿ ಸುಧಾ.ಎಸ್- ವಿಠ್ಠಲ ವ್ಯಾಲಿ ಬಡಾವಣೆRWA
7) ಶ್ರೀ ಗೋಪಾಲಕೃಷ್ಣ.ಎಸ್- ವಿಠ್ಠಲ ವ್ಯಾಲಿ ಬಡಾವಣೆRWA
8) ಶ್ರೀ ಮೋಹನ್‌ಕುಮಾರ್.ಜಿ.ಎನ್- ಚಿಕ್ಕಸಿಪುರ RWA

**ಹಾಜರಿದ್ದ ಸ್ವಯಂ ಸೇವಕರು:-**

1) ಶೇಷಾದ್ರಿನಾಥ
2) ವೆಂಕಟೇಶ್ವರನ್‌ಅಯ್ಯರ್
3)ವಿದ್ಯಾ ನಾಯಕ್ ಮತ್ತು ಇತರರು

**ಹಾಜರಿದ್ದ ಅಧಿಕಾರಿಗಳು:-**

1) ಶ್ರೀ ಎಂ.ಜಿ.ಕುಮಾರ್ - ಸಹಾಯಕಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)

2) ಶ್ರೀ ಮಹೇಶ್- ಹಿರಿಯಆರೋಗ್ಯಪರಿವೀಕ್ಷಕರು.

ಮೇಲೆ ಹಾಜರಿದ್ದ ಸಮಿತಿಸದಸ್ಯರುಗಳು ಮತ್ತು ವಾರ್ಡ್ಅಧ್ಯಕ್ಷರುರವರ ಸಮ್ಮುಖದಲ್ಲಿ ಕೋವಿಡ್-19 ಬಗ್ಗೆ ದಿ:18.05.2021 ರಂದುಜೂಮ್ ಮೀಟಿಂಗ್ ನಡೆದಿರುತ್ತದೆ.ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದವರನ್ನು ಸ್ವಾಗತಕೋರಿ ಸದರಿ ವಾರ್ಡ್‌ನಲ್ಲಿಟ್ರಯಾಜ್ ಸೆಂಟರ್/ ಕೋವಿಡ್‌ಕೇರ್ ಸೆಂಟರ್ ಮತ್ತು ಕೋವಿಡ್-19 ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯನ್ನು ನಡೆಸುತ್ತಿರುವುದಾಗಿ ತಿಳಿಸಿದರು.

## 1. ವಾರ್ಡ್‌ನಲ್ಲಿ ಕೋವಿಡ್‌ಟ್ರಯಾಡ್ ಸೆಂಟರ್/ಕೋವಿಡ್‌ಕೇರ್ ಸೆಂಟರ್‌ಪ್ರಾರಂಭಿಸಲು ಸ್ಥಳಗಳನ್ನು ಗುರುತಿಸಿರುವ ಬಗ್ಗೆ.

ನಾರಾಯಣನಗರ ಎಂ.ಕೆ.ಎಸ್ ಲೇಔಟ್‌ನಲ್ಲಿ ಇರುವ ಸರ್ಕಾರಿ ಶಾಲೆಯಲ್ಲಿ ಮತ್ತು ಹಾಗೂ ವಸಂತಪುರ ಮುಖ್ಯರಸ್ತೆಯಲ್ಲಿರುವ ವಸಂತವಲ್ಲಭ ದೇವಸ್ಥಾನಕ್ಕೆ ಸೇರಿದ ಕಲ್ಯಾಣಿ ಪಕ್ಕದಲ್ಲಿರುವ ಕಲ್ಯಾಣ ಮಂಟಪವನ್ನು ಟ್ರಯಾಡ್ ಸೆಂಟರ್/ಕೋವಿಡ್‌ಕೇರ್ ಸೆಂಟರ್ ಮಾಡಲು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸಂಚಾಲಕರು ಹಾಗೂ ಇತರರೊಂದಿಗೆ ಸ್ಥಳವನ್ನು ಗುರುತಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಸನ್ಮಾನ್ಯ ಶ್ರೀ ಎಂ.ಕೃಷ್ಣಪ್ಪ, ಶಾಸಕರವರು ಗುರುತಿಸಿರುವ ಎರಡು ಜಾಗಗಳಲ್ಲಿ ಕಲ್ಯಾಣಿ ಪಕ್ಕದಲ್ಲಿರುವ ಕಲ್ಯಾಣ ಮಂಟಪವು ಮುಖ್ಯರಸ್ತೆಯಲ್ಲಿರುವುದರಿಂದ ಮತ್ತು ಅಕ್ಕಪಕ್ಕ ಯಾವುದೇ ಮನೆಗಳು ಇಲ್ಲದೇ ಇರುವುದರಿಂದ ಟ್ರಯಾಡ್ ಸೆಂಟರ್/ಕೋವಿಡ್‌ಕೇರ್ ಸೆಂಟರ್‌ಪ್ರಾರಂಭಿಸಲು ಸೂಕ್ತವಾದ ಸ್ಥಳವಾಗಿರುತ್ತದೆ ಎಂದು ತಿಳಿಸುತ್ತಾರೆ. ಸದರಿ ಕಟ್ಟಡವು ಮುಜರಾಯಿ ಇಲಾಖೆಯ ಅಧೀನದಲ್ಲಿರುವುದರಿಂದ ಬಿಬಿಎಂಪಿಗೆ ಹಸ್ತಾಂತರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕೋರುವುದಾಗಿ ತಿಳಿಸಿರುತ್ತಾರೆಂದು ಮತ್ತು ಸದರಿ ಕಟ್ಟಡದಲ್ಲಿ ಪ್ರಾರಂಭಿಸಲು ಮಾನ್ಯ ಜಿಲ್ಲಾಧಿಕಾರಿಗಳು ಸಹ ಸಮ್ಮತಿಯನ್ನು ಸೂಚಿಸಿರುತ್ತಾರೆಂದು ಮಾನ್ಯ ಸ್ಥಳೀಯ ಶಾಸಕರು ಅಧ್ಯಕ್ಷರವರಿಗೆ ತಿಳಿಸಿರುವ ವಿಷಯವನ್ನು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ವಾರ್ಡ್ ಕಮಿಟಿಯ ಸದಸ್ಯರು ಸಹ ಸಮ್ಮತಿಸಿರುತ್ತಾರೆ.

## 2. ಕೋವಿಡ್-19 ತಡೆಗಟ್ಟುವ ನಿಟ್ಟಿನಲ್ಲಿ ತೆಗೆದುಕೊಳ್ಳುವ ಕ್ರಮದ ಕುರಿತು.

ವಸಂತಪುರ ವಾರ್ಡ್ ವ್ಯಾಪ್ತಿಯಲ್ಲಿ 12 ಜನ ಸ್ವಯಂ ಪ್ರೇರಿತರಾಗಿ ಕೋವಿಡ್-19ಗೆ ಸಂಬಂಧಪಟ್ಟಂತೆ ಕೆಲಸ ನಿರ್ವಹಿಸಲು ಆಸಕ್ತಿಯನ್ನು ತೋರಿಸಿರುವ ಬಗ್ಗೆ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ಜೂಮ್ ಮೀಟಿಂಗ್ ನಲ್ಲಿ ಹಾಜರಿದ್ದ ಸ್ವಯಂ ಸೇವಕರು ತಮ್ಮ ಕರ್ತವ್ಯ ವ್ಯಾಪ್ತಿಯ ಬಗ್ಗೆ ಕೇಳಿದಾಗ ವಾರ್ಡ್ ಫೈಟರ್ ಕಮಿಟಿಯ ಬಗ್ಗೆ ಹೊಸ ಸರ್ಕಾರದಿಂದ ಹೊರಡಿಸಲಾದ ಮಾರ್ಗಸೂಚಿಯಲ್ಲಿ ಸ್ವಯಂ ಸೇವಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಬಗ್ಗೆ ವಿವರವಾಗಿ ಅಧ್ಯಕ್ಷರು ತಿಳಿಸಿದರು. ಟ್ರಯಾಡ್ ಸೆಂಟರ್/ಕೋವಿಡ್‌ಕೇರ್ ಸೆಂಟರ್‌ಪ್ರಾರಂಭಿಸುವ ಮುಂದಿನ ದಿನಗಳಲ್ಲಿ ಸದರಿ ವಿಷಯದಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಚರ್ಚಿಸಿ ತಿಳಿಸುವುದಾಗಿ ಎಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ ಮಹದೇಶ್.ಹೆಚ್.ಎಸ್
ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು
ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
ಬೊಮ್ಮನಹಳ್ಳಿ ವಲಯ

ಶ್ರೀ ಎಂ.ಜಿ.[illegible]
ಸಂಚಾಲಕರು ಹಾಗೂ ಸ.ಅ-197

**ಪ್ರತಿಯನ್ನು:-**

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು-ದಕ್ಷಿಣ ವಿಭಾಗರವರ ಅವಗಾಹನೆಗೆ ಸಲ್ಲಿಸಿದೆ.